**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಮೊಟಾರ್ ಅಪಘಾತ ಪರಿಹಾರ ಮಂಡಳಿ**

**ನ್ಯಾಯಾಲಯ, ತಿ. ನರಸೀಪುರ**

**ಎಂ.ವಿ.ಸಿ ಸಂಖ್ಯೆ:1211/2018**

ಆರ್.ಡಬ್ಲೂ.1

| | | |
|---|---|---|
| ಹೆಸರು | : | ಡಾ. ಗೋವಿಂದಶೆಟ್ಟಿ |
| ತಂದೆಯ ಹೆಸರು | : | ಯಾಲಕ್ಕಿ ಶೆಟ್ಟಿ |
| ವಯಸ್ಸು | : | 62 |
| ವೃತ್ತಿ | : | ನಿವೃತ್ತ ವೈದ್ಯರು |
| ವಾಸ | : | ಚಾಮರಾಜನಗರ |

ದಿನಾಂಕಃ 28.08.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ ಜಿ.ಕೆ.ಪಿ. 2 ನೇ ಎದುರುದಾರರ ಪರ ವಕೀಲರಿಂದಃ-**

ನಾನು ತಿ.ನರಸೀಪುರದ ಸಾರ್ವಜನಿಕ ಆಸ್ಪತ್ರೆಯಲ್ಲಿ 2009 ರಿಂದ 2020 ರವರೆಗೆ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೆನು. ನನ್ನ ನಿವೃತ್ತಿಯ ನಂತರ ನಾನು ಚಾಮರಾಜನಗರದ ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಅಧೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನನಗೀಗ ತೋರಿಸಿದ ದಾಖಲೆಯು ನಾನು ಬರೆದ ಎಂ.ಎಲ್.ಸಿ ರಿಜಿಸ್ಟರಿನ ಪ್ರತಿ ಎಂದರೆ ಸರಿ. ಸಾಕ್ಷಿಯು ಅದನ್ನು ಒಪ್ಪಿದ್ದರಿಂದ ಅದನ್ನು ನಿಆರ್-1 ಎಂದು ಗುರುತಿಸಲಾಯಿತು.

ದಿಃ09.12.2016 ರಂದು ರಾತ್ರಿ 11.20 ಗಂಟೆಗೆ ಈ ಪ್ರಕರಣದ ಅರ್ಜಿದಾರ ಅಪಘಾತದ ಹಿನ್ನಲೆಯಲ್ಲಿ ಚಿಕಿತ್ಸೆಗೆ ಬಂದಿದ್ದರು ಎಂದರೆ ಸರಿ. ಆತನೊಂದಿಗೆ ಮಹೇಶ್ ಎನ್ನುವವರು ಬಂದಿದ್ದರು.

ಅರ್ಜಿದಾರರನ್ನು ನಾನು ಪರೀಕ್ಷಿಸಿದಾಗ ಅವರು ದೈಹಿಕವಾಗಿ ಸಕ್ಷಮವಾಗಿದ್ದರು. ಅವರು ನನಗೆ ಮಾಹಿತಿ ನೀಡಿದಾಗ ತಿ.ನರಸೀಪುರ ಪಟ್ಟಣದ ತಿರುಮಕೂಡಲು ವೃತ್ತದ ಬಳಿ ಸ್ವತಃ ಬಿದ್ದು ಅಪಘಾತವಾಗಿದೆ ಎಂದು ಹೇಳಿದರು. ಅವರು ಮೊಟಾರ್ ಸೈಕಲ್ ಸಂಖ್ಯೆ ಕೆಎ–55–ಜೆ–5824 ರಿಂದ ಬಿದ್ದಿರುವುದಾಗಿ ಅವರೇ ನನಗೆ ತಿಳಿಸಿದರು. ಅವರೊಂದಿಗೆ ಬಂದಿದ್ದ ಮಹೇಶ್ ರವರು ಅರ್ಜಿದಾರ ಮೊಟಾರ್ ಸೈಕಲ್ ಸಂಖ್ಯೆ ಕೆಎ–55–ಜೆ–6674 ರಿಂದ ಬಿದ್ದಿರುವುದಾಗಿ ನನಗೆ ತಿಳಿಸಿದರು.

ಅರ್ಜಿದಾರನು ಆಸ್ಪತ್ರೆಗೆ ಬಂದಾಗ ಆತನಿಗಾಗಿದ್ದ ಗಾಯದ ಕುರಿತು ಆತನೇ ಮೊದಲು ಮಾಹಿತಿ ನೀಡಿರುತ್ತಾನೆ. ಆತನ ಮಾಹಿತಿಯನ್ನು ಮೊದಲು ಎಂ.ಎಲ್.ಸಿ.ಯಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿ. ಆತ ಮೊಟಾರ್ ಸೈಕಲಿನ ಬಗ್ಗೆ ನೀಡಿದ ಮಾಹಿತಿಯನ್ನು ಆತನೊಂದಿಗೆ ಬಂದಿದ್ದ ಸದರಿ ಮಹೇಶ್ ರವರ ಮಾಹಿತಿಯ ಮೇರೆಗೆ ತಿದ್ದಲಾಯಿತು ಎಂದರೆ ಸರಿ.

ಅಪಘಾತದಲ್ಲಿ ಭಾಗಿಯಾಗಿದ್ದ ಮೋಟಾರ್ ಸೈಕಲ್ ಸಂಖ್ಯೆ ಕೆಎ–09–6674 ಆಗಿದ್ದು, ಅದನ್ನು ನಾನು ಎಂ.ಎಲ್.ಸಿ. ರಿಜಿಸ್ಟರ್ ನಲ್ಲಿ ನಮೂದಿಸಿದ್ದೇನೆ ಎಂದರೆ ನಾನು ತನಿಖಾಧಿಕಾರಿ ಆಗಿರದ ಕಾರಣ ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಸಾಕ್ಷಿಯನ್ನು 2 ನೇ ಎದುರುದಾರರ ಪರ ವಕೀಲರು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಕೋರಿದ್ದು, ಅವರ ಕೋರಿಕೆಯನ್ನು ಮನ್ನಿಸಲಾಯಿತು.**

**ಪಾಟೀ ಸವಾಲುಃ– ಶ್ರೀ ಜಿ.ಕೆ.ಪಿ. 2 ನೇ ಎದುರುದಾರರ ಪರ ವಕೀಲರಿಂದಃ–**

ಎಂ.ಎಲ್.ಸಿ. ರಿಜಿಸ್ಟರಿನಲ್ಲಿ ನಾನು ಮೊದಲು ಮೋಟಾರ್ ಸೈಕಲ್ ಸಂಖ್ಯೆ ಕೆಎ–09–6674 ನ್ನೇ ನಮೂದು ಮಾಡಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ತಾನು ಮೊದಲು ಮೋಟಾರ್ ಸೈಕಲ್ ಸಂಖ್ಯೆ ಕೆಎ–55–ಜೆ–674 ನ್ನು ಎಂ.ಎಲ್.ಸಿ. ರಿಜಿಸ್ಟರಿನಲ್ಲಿ ನಮೂದಿಸಿದ್ದೆ ಎಂದು, ನಂತರ ಅದನ್ನು ತಿದ್ದುಪಡಿ ಮಾಡಿ ಮೋಟಾರ್ ಸೈಕಲ್ ಸಂಖ್ಯೆ ಕೆಎ–55–ಜೆ–5824 ನ್ನು ಬರೆದಿದ್ದೇನೆ ಎಂದು ನುಡಿದಿದ್ದಾರೆ.

ಎಂ.ಎಲ್.ಸಿ. ರಿಜಿಸ್ಟರಿನ ಎಡಅಂಚಿನಲ್ಲಿ ಮೋಟಾರ್ ಸೈಕಲ್ ಸಂಖ್ಯೆ ಕೆಎ–09–6674 ನಮೂದಿದೆ ಎಂದರೆ ಸರಿ. ಅದನ್ನು ಆ ರಿಜಿಸ್ಟರಿನಲ್ಲಿ ಏಕೆ ನಮೂದಿಸಿದ್ದೀರಿ ಎಂದರೆ ಅರ್ಜಿದಾರರೊಂದಿಗೆ ಬಂದಿದ್ದ ಸದರಿ ಮಹೇಶ್ ರವರು ನೀಡಿದ ಮಾಹಿತಿಯ ಮೇರೆಗೆ ನಮೂದಿಸಿದ್ದೇನೆ. ಆ ಮಾಹಿತಿಯನ್ನು ಸದರಿ ಮಹೇಶ್ ರವರು ಹೇಳಿರದೇ ಅರ್ಜಿದಾರರು ಹೇಳಿದ್ದರು ಎಂದರೆ ಸರಿಯಲ್ಲ.

ಸದರಿ ಮೋಟಾರ್ ಸೈಕಲ್ ಸಂಖ್ಯೆ ಕೆಎ–09–6674 ಅರ್ಜಿದಾರರಿಗೆ ಸೇರಿದೆ ಎಂದರೆ ನನಗೆ ಗೊತ್ತಿಲ್ಲ. ಅದಕ್ಕೆ ವಿಮೆ ಇರದ ಕಾರಣ, ಅದನ್ನೇ ನಾನು ಎಂ.ಎಲ್.ಸಿ. ರಿಜಿಷ್ಟರಿನಲ್ಲಿ ತಿದ್ದಿರುತ್ತೇನೆ ಎಂದರೆ ಸರಿಯಲ್ಲ.

ಯಾವುದಾದರೂ ವೈದ್ಯಕೀಯ ದಾಖಲೆಗಳನ್ನು ತಿದ್ದಿದಾಗ ಆ ಜಾಗದಲ್ಲಿ ಚಿಕ್ಕ ಸಹಿಯನ್ನು ಮಾಡಬೇಕು ಎಂದರೆ ಸರಿ. ನಿಆರ್–1ರ ಎಂ.ಎಲ್.ಸಿ. ರಿಜಿಷ್ಟರಿನಲ್ಲಿ ತಿದ್ದಿರುವ ಜಾಗದಲ್ಲಿ ನಾನು ಚಿಕ್ಕ ಸಹಿ ಮಾಡಿಲ್ಲ ಎಂದರೆ ಸರಿ, ಆದರೆ ತಿದ್ದಿರುವ ಬರವಣಿಗೆ ನನ್ನದೇ ಆಗಿರುತ್ತದೆ.

ಮೋಟಾರ್ ಸೈಕಲ್ ಸಂಖ್ಯೆ ಕೆಎ–55–ಜೆ–5824 ಅಪಘಾತದಲ್ಲಿ ಭಾಗಿಯಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಅರ್ಜಿದಾರನಿಗೆ ಸಹಾಯ ಮಾಡಲು ನಿಆರ್–1 ಎಂ.ಎಲ್.ಸಿ. ರಿಜಿಷ್ಟರಿನಲ್ಲಿ ತಿದ್ದಿರುತ್ತೇನೆ ಎಂದರೆ ಸರಿಯಲ್ಲ.

ಅರ್ಜಿದಾರನು ಹೆಚ್ಚಿನ ಚಿಕಿತ್ಸೆ ಪಡೆಯಲು ಉನ್ನತ ಆಸ್ಪತ್ರೆಗಳಿಗೆ ಹೋಗಬೇಕು ಎಂದು ನಾನು ಶಿಫಾರಸ್ಸು ಮಾಡಿರುತ್ತೇನೆ. ಅರ್ಜಿದಾರನು ಹೆಚ್ಚಿನ ಚಿಕಿತ್ಸೆಯನ್ನು ಪಡೆದ ಆಸ್ಪತ್ರೆಯಿಂದ ಆತನ ಚಿಕಿತ್ಸಾ ವರದಿಯು ನನಗೆ ಬಂದಿಲ್ಲ.

ಸಾಮಾನ್ಯವಾಗಿ ಗಾಯಾಳುವಿಗೆ ಮೊದಲು ಚಿಕಿತ್ಸೆ ನೀಡಿದ ವೈದ್ಯರು ಆ ಗಾಯಾಳುವಿನ ಹೆಚ್ಚಿನ ಚಿಕಿತ್ಸೆಯ ವರದಿಯ ಆಧಾರದ ಮೇರೆಗೆ ಗಾಯದ ಪ್ರಮಾಣಪತ್ರವನ್ನು ನೀಡುತ್ತಾರೆ ಎಂದರೆ ಸರಿ.

**<u>ಪಾಟೀಸವಾಲುಃ-ಶ್ರೀ.ಎಸ್.ಸಿ.ಎಸ್. ಅರ್ಜಿದಾರರ ಪರ ವಕೀಲರಿಂದಃ-</u>**

ನಿಆರ್-1ರ ಎಂ.ಎಲ್.ಸಿ.ರಿಜಿಸ್ಟರಿನಲ್ಲಿ ಮಾಹಿತಿಯನ್ನು ಅರ್ಜಿದಾರರ ಹೇಳಿಕೆಯಂತೆ ನಮೂದಿಸಿದ್ದೇನೆ ಎಂದರೆ ಸರಿ. ಅವರ ಮಾಹಿತಿಯಂತೆ ಅಪಘಾತಕ್ಕೊಳಗಾಗಿದ್ದ ಮೊಟಾರ್ ಸೈಕಲ್ ಸಂಖ್ಯೆ ಕೆಎ-55-ಜೆ-5824 ನ್ನು ಆ ರಿಜಿಸ್ಟರಿನಲ್ಲಿ ನಮೂದಿಸಿದ್ದೇನೆ ಎಂದರೆ ಸರಿ.

ವೈದ್ಯಕೀಯ ದಾಖಲೆಗಳಲ್ಲಿ ಸಣ್ಣ ಪುಟ್ಟ ತಪ್ಪುಗಳನ್ನು ತಿದ್ದುಪಡಿ ಮಾಡಿದಾಗ ಅವುಗಳನ್ನು ಮಾಡಿದವರು ಕೆಲವೊಮ್ಮೆ ಚಿಕ್ಕಸಹಿಗಳನ್ನು ಮಾಡುವುದಿಲ್ಲ ಎಂದರೆ ಸರಿಯಲ್ಲ.

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಎಂ.ಎ.ಸಿ.ಟಿ. ನ್ಯಾಯಾಲಯ,**
**ತಿ.ನರಸೀಪುರ**